


ಹೇಗಪ್ಪಾ?' ಎಂದ ಛೇಡಿಸುವ ದನಿಯಲ್ಲಿ.

'ಅಷ್ಟೇ ಕಣೋ,' ಎಂದೆ ಕೊಂಚ ದಯನೀಯ ದನಿಯಲ್ಲಿ.

'ಏ ಅದೆಲ್ಲಾ ನಮ್ಮಂತೋರ ಪಾಡು ಕಣೋ... ಈಗ ನನ್ನ ನೋಡು... ಓದಿ ಎಲ್ಲಾ ಚೆಲ್ಲಾ ಚದುರಾಗಿ ಹೋದ್ವಾ? ಒಂದೆರಡು ವರ್ಷ ಮತ್ತೆ ಇಲ್ಲಿ ಪೋಸ್ಟರ್ ಅಂಟಿಸೋ ಕೆಲಸ ಮಾಡ್ದೆ. ಪಾರ್ಟಿ, ರೈತ ಸಂಘ... ಯಾರು ಹೋರಾಟ ಮಾಡ್ತಾರೋ ಅವ್ರಿಗೆ ಅಳಿಲುಸೇವೆ. ಅದೇ ಒಂದು ಖುಷಿ. ಧರಣಿ ಮೀಟಿಂಗ್‌ನಲ್ಲಿ ಮೂಲೇಲಿ ನಿಂತು ಭಾಷಣ ಕೇಳೋದು, ಪ್ರೋಗ್ರಾಂ ಮುಗಿದ ಮೇಲೆ ಕುರ್ಚಿ ಎತ್ತಿಡೋದು, ಮೈಕ್ ಸೆಟ್ ಎಲ್ಲ ಡಬ್ಬಕ್ಕೆ ತುಂಬೋದು, ನೀರಿನ ಕ್ಯಾನ್ ಎತ್ತಿಡೋದು. ಲೀಡರುಗಳೆಲ್ಲಾ ನಮ್ಮ ಬೆನ್ನು ತಟ್ಟಿ 'ಅರ್ಜೆಂಟ್ ಕೆಲಸ ಇದೆ ಕಣ್ರಪ್ಪಾ, ಎಲ್ಲಾ ಎತ್ತಿಟ್ಟು ಮಿಸ್ಸಾಗದಂಗೆ ತಲುಪ್ಸಿ... ನಾಳೆ ಮತ್ತೆ ಆಫೀಸಲ್ಲಿ ಏನಾದ್ರೂ ಪೇಮೆಂಟ್ ಬಾಕಿ ಇದ್ರೆ ಹೇಳ್ಬಿಡಿ' ಎಂದು ಹೇಳಿ ಹೋಗೋರು.

ನನ್ನಂತೋನಿಗೆ ಏನು, ಯಾವ ಸ್ಕಿಲ್ಲೂ ಇಲ್ಲ, ಪ್ರತಿಭೇನೂ ಇಲ್ಲ. ಹಾಡೋಕೆ ಬರಲ್ಲ, ಭಾಷಣ ಮಾಡೋಕೆ ಬರಲ್ಲ, ನಿಮ್ ತರ ಬರೆಯೋಕೂ ಬರಲ್ಲ; ಪೋಸ್ಟರ್ ಬರೆಯೋ ಆರ್ಟ್ ವರ್ಕೂ ಬರಲ್ಲ. ಸುಮ್ನೆ ನೆರಳಿನ ತರ... ಆದ್ರೂ ಹೋರಾಟ ಅದೂ ಇದೂ ಮಣ್ಣು ಮಸಿ ಅಂತ ಇರುತ್ತಲ್ಲ, ಅದರ ಜೊತೆ ಇರೋದೇ ಒಂದು ಥ್ರಿಲ್ಲು.'

ನೀನು ಒಂದೆರಡು ಸರ್ತಿ ಬಂದಿದ್ದಾಗ ದೂರದಿಂದ ನೋಡಿದ್ದೆ, ಮಾತಾಡ್ಸೋಕೆ ಆಗಲೇ ಇಲ್ಲ, ನಾನು ಊಟ ತರೋಕೆ ಆಟೋದಲ್ಲಿ ಹೋಗಿದ್ದೆ.'

ನನಗೆ ಗಂಟಲು ಕಟ್ಟಿತು.

'ನನ್ನಂತೋರು ಏನಾದರೂ ಕೆಲಸ ಹುಡುಕಲೇ ಬೇಕಲ್ಲಪ್ಪಾ... ಇಲ್ಲೇ ಫ್ಯಾಕ್ಟರಿನಲ್ಲಿ ಕೆಲಸಕ್ಕೆ ಸೇರ್ಕೊಂಡೆ. ಕೈ ಬಾಯಿಗೆ ಬೀಗ ಹಾಕಿಯೇ ಸೇರ್ಕೋಬೇಕಲ್ಲಪ್ಪ ನಮ್ಮಂತೋರು... ಯೂನಿಯನ್ ಅದೂ ಇದೂ ಅಂತ ಶುರು ಮಾಡಿದಿಯೋ ಹೂತಾಕಿ ಬಿಡ್ತೀನಿ ಅಂತ ನನ್ನ ಸೋದರಮಾವ ತಾಕೀತು ಮಾಡಿದ್ರು... ಅವ್ರೇ ಕೆಲಸ ಕೊಡ್ಸಿದ್ರು. ಆದ್ರೂ ಫ್ಯಾಕ್ಟರಿ ಡ್ಯೂಟಿ ಮುಗಿಸ್ಕೊಂಡು ಪಾರ್ಟಿ ಆಫೀಸಲ್ಲಿ ನಿಂತಿರ್ತಿದ್ದೆ. ಏನ್ಮಾಡೋದು ಹೇಳು, ಅವ್ರು ಹೇಳೋ ಹಗಲಿನ ಕೆಲಸ ಮಾಡೋಕೆ ನಂಗೆ